







ಮೂಕ ವಿಸ್ಮಿತರಾಗುತ್ತೇವೆ. ಈ ಕಾಲದ ಇಂಜಿನಿಯರುಗಳ ಶಿಲ್ಪ ಸಾಮರ್ಥ್ಯ ನಮ್ಮ ಊಹೆಗೆ ನಿಲುಕದ ಸಂಗತಿಯಾಗಿದೆ. ದೊಡ್ಡ ಗುಮ್ಮಟದ ಕೆಳಗೆ ಮಸೀದಿಯಲ್ಲಿ ನಡೆಯುವ ಪ್ರಾರ್ಥನೆ ಮಸೀದಿಯ ಉದ್ದಗಲಕ್ಕೂ ಯಾವುದೇ ಧ್ವನಿವರ್ಧಕದ ನೆರವಿಲ್ಲದೆ ಸ್ಪಷ್ಟವಾಗಿ ಮಸೀದಿಯ ಎಲ್ಲ ಭಾಗಕ್ಕೂ ಕೇಳುವಂತೆ ಧ್ವನಿ ವಿನ್ಯಾಸ ಮಾಡಿರುವುದೂ ಇಲ್ಲಿ ಒಂದು ಅಚ್ಚರಿ ಹುಟ್ಟಿಸುವ ಸಂಗತಿಯಾಗಿದೆ.

ಈ ಮಸೀದಿಯ ವಿನ್ಯಾಸ ಮತ್ತು ತಂತ್ರಜ್ಞಾನ ಇಷ್ಟೊಂದು ವಿಶಿಷ್ಟವಾಗಿದ್ದರೂ ಈ ಬಗ್ಗೆ ಹೆಚ್ಚು ಪ್ರಚಾರ ಆಗಿಲ್ಲ. ಹಾಗಾಗಿ ದೊಡ್ಡ ಸಂಖ್ಯೆಯ ಪ್ರವಾಸಿಗರನ್ನು ಇತ್ತ ಸೆಳೆಯಲಾಗುತ್ತಿಲ್ಲ. ಕೇಂದ್ರದ ಪುರಾತತ್ವ ಇಲಾಖೆ ಈ ಕಟ್ಟಡವನ್ನು ರಾಷ್ಟ್ರೀಯ ಸ್ಮಾರಕ ಎಂದು ಘೋಷಿಸಿದ್ದು, ಇದರ ನಿರ್ವಹಣೆಯ ಹೊಣೆಯನ್ನು ಹೊತ್ತಿದೆ. ಇಂತಹದ್ದೊಂದು ಅದ್ಭುತ ಎನ್ನಬಹುದಾದ ವಾಸ್ತುಶೈಲಿಯ ಬಗ್ಗೆ ಪ್ರಚಾರ ಮಾಡಿ ಪ್ರವಾಸಿಗರನ್ನು ಇತ್ತ ಸೆಳೆಯುವ ಕೆಲಸವನ್ನು ಕೇಂದ್ರ ಅಥವಾ ರಾಜ್ಯದ ಪ್ರವಾಸೋದ್ಯಮ ಇಲಾಖೆಯೂ ಮಾಡಬಹುದು.

ಕಲ್ಬುರ್ಗಿಗೆ ದೇಶದ ಎಲ್ಲೆಡೆಯಿಂದ ರೈಲು ಮಾರ್ಗ ಅಥವಾ ರಸ್ತೆ ಮುಖೇನ ಸುಲಭವಾಗಿ ತಲುಪಬಹುದು. ಹೈದರಾಬಾದ್ ಹತ್ತಿರದ ವಿಮಾನ ನಿಲ್ದಾಣ, 200 ಕಿ.ಮೀ ದೂರದಲ್ಲಿದೆ. ಬಿರುಬಿಸಿಲಿಗೆ ಹೆಸರಾಗಿರುವ ಇಲ್ಲಿಗೆ ಬರಲು ಪ್ರಶಸ್ತವಾದ ಸಮಯ, ಸೆಪ್ಟೆಂಬರ್‌ನಿಂದ ಜನವರಿ ತಿಂಗಳು.